

ಎಡದಿಂದ ಬಲಕ್ಕೆ:

1. ಸಂವತ್ಸರದ ಫಲವನ್ನು ಕೇಳಿಸಿಕೊಳ್ಳುವಾಗ ಇರಲಿ ತಾಳ್ಮೆ 4
3. ಕಲ್ಲು ಹೊಡೆದರೆಂಬ ಸಂಶಯದಿಂದ ನಡೆದದ್ದು ಆ ಜಗಳ 3
4. ಗಳಿಕೆ ಕಡಿಮೆಯಾದೊಡನೆ ಆರಂಭವಾಯಿತು ಭಾರೀ ಯುದ್ಧ 3
6. ಸರಕುಗಳ ಬೆಲೆಗಳ ನಿರ್ಧಾರ ಮಾಡುವುದು ರಾಜ್ಯದ ಆಡಳಿತ ವ್ಯವಸ್ಥೆಯೇ ತಾನೇ? 4
7. ಬಳಿ ಬಂದವರಿಗೆಲ್ಲ ಒಳಿತಾಗಲೆಂದು ನೀಡಿದ್ದು ದೊಡ್ಡ ಬಹುಮಾನ 4
8. ಕಣ್ಣೀರು ಕರೆವ ಸ್ಥಿತಿ ತಲುಪಿದ್ದಾನೆ 'ಲೆಕ್ಕ ಬರೆಯುವವ' 4
10. ಮರೆತುಹೋದನಾ ಆ ದೇವ, 'ಲಕ್ಷ್ಮೀ ಪತಿ'? 4
12. ಚಳಿಯ ನಡುವೆಯೇ ಆಳುವವರ ವಿರುದ್ಧ ಭಾರೀ ಮುಷ್ಕರ 4
14. ವಿಷದ ಪ್ರಭಾವ ಇಳಿಯುವ ವೇಳೆಗೆ ಸೂರ್ಯೋದಯದ ಸಮಯವಾಗಿತ್ತು 4
16. ಕೆಟ್ಟ ಜನರ ಮನದ ಆಲೋಚನೆಯೇ ಬಹಳ ಕ್ರೂರ 3
17. ಹಳತಾಗುವಂತಹದಲ್ಲ ಬಿಡಿ, ಈ ಸಾಗರ ರತ್ನ 3
18. ಮುರುಗನಿಗೆ ತೊಡಿಸಿದ ವಸ್ತ್ರದಲ್ಲಿ ಒಂದು ಮಡಿಕೆಯೂ ಕೆಟ್ಟಿಲ್ಲ 4

ಮೇಲಿಂದ ಕೆಳಕ್ಕೆ:

1. ಹೊಸ ಹೊಸ ರೀತಿಗಳ ಶೌರ್ಯದ ಕೆಲಸ 3
2. ಕಾರಖಾನೆಯನ್ನು ತೆರೆಯಲು ಆಗುವುದಿಲ್ಲ ಎಂದರೇ? 3
3. ಪ್ರಸಿದ್ಧ ಕವನಗಳ ಬಗ್ಗೆ ಕೇಳಿದೊಡನೆ ತಬ್ಬಿಬ್ಬು! 4
5. ಎಂಥ ಗಟ್ಟಿಗರನ್ನೂ ಮೇಲೇರಲು ಬಿಡದಂಥ ಭಾರೀ ಚರಂಡಿ 3
7. ಬೇಡಿ ಬದುಕುವವರ ಮುಂದೆ ಬರೀ ಜಂಭದ ವಾರ್ತೆ 4
9. ಕೇಳಿದವರಾರೂ ಇಲ್ಲ; ಅಂತಹ ಕಡಲಂಚಿನ ಪ್ರದೇಶ 4
11. ಕೋವಿಯನ್ನು ಹಿಡಿದು ಹೆದರಿಸಿದವ ನೌಕಾ ಚಾಲಕ 3
13. ಬೆಳೆದ ಕಾಳನ್ನು ಕೇಳುವವರೇ ಇಲ್ಲ, ಅದಕ್ಕೇ ಇಂಥ ಚಿಂತೆ 4
14. ವೈರಾಗ್ಯದ ಹಾದಿ ಹಿಡಿದವನನ್ನು ಬೆದರಿಸಿದ್ದು ಒಂದು ಸರೀಸೃಪ 3
15. ಹಲವರು ಸೇರಿದಾಗ ಹರಿದು ಬಂತು ಮಾತಿನ ಅಲೆ ಅಲೆ 3

---

## 28—01—2021 ಉತ್ತರಗಳು

ಎಡದಿಂದ ಬಲಕ್ಕೆ:

1. ನಿರಾಯುಧ 3. ಧವಲ 4. ರಜನಿ 6. ದಣ್ಣಾಯಕ 8. ಕಾರಕೂನ 10. ಕೇಶವ 12. ರಕ್ತರಂಗು 16. ಗುಡಾಣ17. ಕುಲಾವಿ 18. ವರ್ತಮಾನ

ಮೇಲಿಂದ ಕೆಳಕ್ಕೆ:

1. ನಿಲಯ 2. ಧರಣಿ 3. ಧಡಿಯ 5. ನಿರ್ಧಾರ 6. ದಬ್ಬಾಳಿಕೆ 7. ಕಳ್ಳತನ 8. ಕಾಟಾಚಾರ 9. ನಸುನಗು 11. ತರಗು 13. ಕ್ಷರವಿ (=ವಿರಕ್ತ ತಲೆಕೆಳಗು) 14. ಪ್ರಣವ 15. ಶಕುನ



# ಕ್ಯಾಸಲ್: ಅದೇನು ನಿರ್ಮಿತಿ?

ಕ್ಯಾಸಲ್ (Castle): ಅದು ಬೃಹದಾಕಾರದ, ಭಾರೀ ವಿಸ್ತಾರದ ಒಂದು ವಿಶಿಷ್ಟ ವಾಸ್ತು ನಿರ್ಮಿತಿ. ಪ್ರಸ್ತುತ ಎಲ್ಲೂ ನಿರ್ಮಾಣದಲ್ಲಿ ಇಲ್ಲದ ಕಟ್ಟಡ ವಿಧ ಇದು. ಈಗ ಜಗತ್ತಿನಲ್ಲಿ ಉಳಿದಿರುವ ಎಲ್ಲ ಕ್ಯಾಸಲ್‌ಗಳ ಮತ್ತು ಕ್ಯಾಸಲ್ ಅವಶೇಷಗಳ ಕಾಲ ಈಗ್ಗೆ 500 ರಿಂದ 1000 ವರ್ಷಗಳ ಹಿಂದಿನ ಅವಧಿ. ಹಾಗೆ ತುಂಬ ಪ್ರಾಚೀನತೆಯನ್ನು ಪಡೆದು, ಐತಿಹಾಸಿಕ ಪ್ರಸಿದ್ಧಿಯನ್ನು ಹೊಂದಿರುವ ಈ ಬಗೆಯ ಕಟ್ಟಡಗಳ ಸಂಖ್ಯೆ ಯೂರೋಪ್ ನಲ್ಲೇ ಗರಿಷ್ಠ. ಇಂದಿಗೂ ದೃಢವಾಗಿ ಉಳಿದಿರುವ ಕೆಲವೇ ಕ್ಯಾಸಲ್‌ಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಎರಡು ಕ್ಯಾಸಲ್‌ಗಳನ್ನು ಚಿತ್ರಗಳಲ್ಲಿ ಗಮನಿಸಿ.

ವಾಸ್ತವವಾಗಿ ಕ್ಯಾಸಲ್‌ಗಳು 'ಅರಸರ ನಿವಾಸ'ಗಳಾಗಿದ್ದುವು. ಆದರೆ, ಅವು 'ಅರಮನೆ'ಗಳಲ್ಲ. ಅರಮನೆಗಳಂತೆ ಅರಸುತನದ ಶ್ರೀಮಂತಿಕೆಯನ್ನು, ವೈಭವಗಳನ್ನು ಪ್ರದರ್ಶಿಸುವ ಉದ್ದೇಶ ಕ್ಯಾಸಲ್‌ಗಳದಲ್ಲ. ಸುಭದ್ರ ರಕ್ಷಣೆ ಕ್ಯಾಸಲ್‌ಗಳ ಮೂಲ ಉದ್ದೇಶ. ಅದಕ್ಕೇ, ಕ್ಯಾಸಲ್‌ಗಳದು 'ಕೋಟೆ' ಸಹಿತ ನಿರ್ಮಿತಿ; ಸಾಮಾನ್ಯವಾಗಿ ಬೆಟ್ಟ ಗುಡ್ಡಗಳಂತಹ ಉನ್ನತ ಪ್ರದೇಶದಲ್ಲಿ ಅವುಗಳ ನಿರ್ಮಾಣ. ಹೊರಗೆ ಶಿಲೆಗಳಿಂದ ಕಟ್ಟಲಾದ ಎತ್ತರವಾದ, ಸುಭದ್ರವಾದ ಕೋಟೆ ಗೋಡೆ; ಅದನ್ನು ಪರಿವರಿಸಿದ ಆಳವಾದ ಅಗಲವೂ ಆದ ಕಂದಕ. ಕೋಟೆಯ ಮೇಲ್ಭಾಗದಲ್ಲಿ ಸಶಸ್ತ್ರ ಕಾವಲು ಪಡೆಗಳ ನಿರಂತರ ಗಸ್ತು. ಕೋಟೆಯೊಳಗೆ ಮೂರು ನಾಲ್ಕು ಮಹಡಿಗಳ ವಿಶಾಲ ಕಟ್ಟಡ. ಹತ್ತಾರು ಕೊಠಡಿಗಳ, ಹಲವಾರು ವಿಸ್ತಾರ ಹಜಾರಗಳ ಒಳ ವಿನ್ಯಾಸ. ಕಟ್ಟಡದ ಒಳಗಿನಿಂದಲೇ ಶತ್ರುಗಳ ಮೇಲೆ 'ಬಾಣ' ಪ್ರಯೋಗಿಸಲು ಅನುವಾದ ಕಿಂಡಿ ಕಿಟಕಿಗಳು.

ಕ್ಯಾಸಲ್‌ನಲ್ಲಿ ಅರಸನ ಅಥವಾ ಅರಸನಿಂದ ನಿಯೋಜಿತರಾದ ಪ್ರಧಾನ ಆಡಳಿತಗಾರರ ವಾಸ್ತವ್ಯ. ಜೊತೆಗೆ ಸೇವಕರು, ಸೈನಿಕರು ಮತ್ತು ಅವರ ಶಸ್ತ್ರಾಸ್ತ್ರಗಳು ಕೂಡ. ಅರಸ ಅಥವಾ ಚಕ್ರವರ್ತಿಯೊಬ್ಬ




ಅನ್ಯರ ಪ್ರದೇಶವೊಂದನ್ನು ಆಕ್ರಮಿಸಿ ಕೈವಶ ಮಾಡಿಕೊಂಡಾಗ ಅಂಥ ಪ್ರದೇಶವನ್ನು ಅಲ್ಲಿನ ಜನರ ಸಹಿತ ಉಳಿಸಿಕೊಳ್ಳಲು, ಆಡಳಿತಗಾರರನ್ನು ರಕ್ಷಿಸಲು, ಧಾಳಿಕೋರರೊಡನೆ ಸೆಣಸಲು ಬೇಕಾದ ಎಲ್ಲ ವ್ಯವಸ್ಥೆ ಕ್ಯಾಸಲ್‌ನ ಒಳಗೆ.

ಏನೇ ಆದರೂ, ಎಷ್ಟೇ ಭವ್ಯವಾಗಿದ್ದರೂ, ಎಷ್ಟೇ ದೃಢವಾಗಿದ್ದರೂ ಕ್ಯಾಸಲ್‌ಗಳ ರಕ್ಷಣಾ ಸಾಮರ್ಥ್ಯ ಕತ್ತಿಗುರಾಣಿ ಮತ್ತು ಬಿಲ್ಲುಬಾಣಗಳಂಥ ಶಸ್ತ್ರಾಸ್ತ್ರಗಳ ಕಾಲಕ್ಕಷ್ಟೇ ಸೂಕ್ತವಾಗಿತ್ತು. ಯುದ್ಧಗಳಲ್ಲಿ ಸಿಡಿಮದ್ದಿನ ಬಳಕೆ ಆರಂಭವಾದೊಡನೆ ಕ್ಯಾಸಲ್‌ಗಳು ಮಹತ್ವವನ್ನು ಕಳೆದುಕೊಂಡವು. ಈಗಿನ ಯುದ್ಧಾಸ್ತ್ರಗಳಂತೂ ಎಂಥದೇ ಕ್ಯಾಸಲ್ ಅನ್ನೂ ಕ್ಷಣಮಾತ್ರದಲ್ಲೇ ಧೂಳೀಪಟ ಮಾಡಬಲ್ಲವು.

ಆದ್ದರಿಂದಲೇ, ಈಗ ಉಳಿದಿರುವ ಕ್ಯಾಸಲ್‌ಗಳದು ಕೇವಲ ಐತಿಹಾಸಿಕ ಮಹತ್ವ; ಪ್ರೇಕ್ಷಣೀಯ ನಿರ್ಮಿತಿಗಳಾಗಿ ಮಾತ್ರ ಅವುಗಳ ಅಸ್ತಿತ್ವ. ಈಗಲೂ ದೃಢವಾಗಿ, ಪರಿಪೂರ್ಣವಾಗಿ ಉಳಿದಿರುವ ಕ್ಯಾಸಲ್‌ಗಳ ಸಂಖ್ಯೆ ಕೆಲವೇ ನೂರು, ಅಷ್ಟೆ.

■ ಎನ್. ವಾಸುದೇವ್